ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 130-137
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಚಿತ್ರದುರ್ಗ ಪಾಳೆಯಗಾರರ ರಾಜಕೀಯ ಚರಿತ್ರೆ : ಚಾರಿತ್ರಿಕ ಅವಲೋಕನ

**ಡಾ. ರೇವಣಸಿದ್ದಪ್ಪ ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ. ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ

**Abstract:**
*ಚಿತ್ರದುರ್ಗ ಪಾಳೆಯಗಾರರು ಕರ್ನಾಟಕದ ಮಧ್ಯಕಾಲೀನ ರಾಜಕೀಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದ್ದಾರೆ. ನಾಯಕ ವಂಶದ ಆಳ್ವಿಕೆಯಲ್ಲಿ ಚಿತ್ರದುರ್ಗವು ಪ್ರಬಲ ರಾಜಕೀಯ ಮತ್ತು ಆಡಳಿತಾತ್ಮಕ ಕೇಂದ್ರವಾಗಿ ಬೆಳೆದು, ತನ್ನದೇ ಆದ ವಿಶಿಷ್ಟ ರಾಜಕೀಯ ಅಸ್ತಿತ್ವವನ್ನು ರೂಪಿಸಿಕೊಂಡಿತು. ಪಾಳೆಯಗಾರರ ಆಡಳಿತ ವ್ಯವಸ್ಥೆ, ಪ್ರಾದೇಶಿಕ ವಿಸ್ತರಣೆ, ನೆರೆರಾಜ್ಯಗಳೊಂದಿಗಿನ ಸಂಬಂಧ ಹಾಗೂ ಯುದ್ಧತಂತ್ರಗಳು ಅವರ ರಾಜಕೀಯ ಚರಿತ್ರೆಯ ಪ್ರಮುಖ ಆಯಾಮಗಳಾಗಿವೆ. ಹೈದರಾಲಿ ಮತ್ತು ಟಿಪ್ಪು ಸುಲ್ತಾನರೊಂದಿಗೆ ನಡೆದ ಸಂಘರ್ಷಗಳು ಚಿತ್ರದುರ್ಗ ಪಾಳೆಯಗಾರರ ರಾಜಕೀಯ ಇತಿಹಾಸದಲ್ಲಿ ಮಹತ್ವದ ತಿರುವುಗಳನ್ನು ತಂದವು. ವಿಶೇಷವಾಗಿ ಮದಕರಿ ನಾಯಕರ ಕಾಲದಲ್ಲಿ ಚಿತ್ರದುರ್ಗದ ರಾಜಕೀಯ ಶಕ್ತಿ ಮತ್ತು ಪ್ರತಿರೋಧದ ಸ್ವರೂಪ ಗಮನಾರ್ಹವಾಗಿ ಬೆಳವಣಿಗೆಯಾಯಿತು. ಈ ಲೇಖನವು ಚಿತ್ರದುರ್ಗ ಪಾಳೆಯಗಾರರ ಉಗಮ, ರಾಜಕೀಯ ಬೆಳವಣಿಗೆ, ಆಡಳಿತ, ಸಂಘರ್ಷಗಳು ಮತ್ತು ಅವರ ಐತಿಹಾಸಿಕ ಕೊಡುಗೆಯನ್ನು ಚಾರಿತ್ರಿಕ ನೆಲೆಯಲ್ಲಿ ಅವಲೋಕಿಸುತ್ತದೆ.*

**Keywords:** *ಚಿತ್ರದುರ್ಗ ಪಾಳೆಯಗಾರರು, ಮದಕರಿ ನಾಯಕ, ರಾಜಕೀಯ ಚರಿತ್ರೆ, ನಾಯಕ ವಂಶ, ಕರ್ನಾಟಕದ ಇತಿಹಾಸ*

## ಪೀಠಿಕೆ

ಚರಿತ್ರೆಯಲ್ಲಿ ಬೇಡ ಬುಡಕಟ್ಟು ಮೂಲದ, ಕಾಮಗೇತಿ ಕುಲತಿಲಕ, ಕಾಮಗೇತಿ ಅರಸು, ಶ್ರೀಮನ್ಮಹಾನಾಯಕಚಾರ್ಯರೆಂದು ಗುರುತಿಸಿಕೊಂಡಿರುವ ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆ ಮೂರು ಮನೆತನಗಳಿಂದ ಸಾಗಿಬಂದಿದೆ. ಅವುಗಳಲ್ಲಿ ಮತ್ತಿ ಹಾಗೂ ಬಿಳಿಚೋಡು ಮನೆತನಗಳು ಆಳ್ವಿಕೆ ನಡೆಸಿದ್ದರೆ, ಮೂರನೇ ಹಾಗೂ ಕೊನೆಯ ಶಾಗಲೆ ಅಥವಾ ಸಾಗಲೆ ಮನೆತನ ಆಳ್ವಿಕೆಯಿಂದ ದೂರವೇ ಉಳಿದಿತ್ತು. ಅಥವಾ ಆ ವೇಳೆಗೆ ಸಂಸ್ಥಾನ ಅವನತಿ ಹೊಂದಿತ್ತು.

ಕ್ರಿ.ಶ. ಹದಿನೈದನೆಯ ಶತಮಾನದಿಂದ ಹದಿನಾರನೆಯ ಶತಮಾನದ ಪ್ರಥಮಾರ್ಧದವರೆಗೆ ವಿಜಯನಗರ ಸಾಮ್ರಾಜ್ಯದ ಸಾಮಂತ ಅಮರನಾಯಂಕರರಾಗಿ ಆಳ್ವಿಕೆ ನಡೆಸಿದ್ದ ಚಿತ್ರದುರ್ಗದರಸರು ಹದಿನಾರನೆಯ ಶತಮಾನದ ದ್ವಿತೀಯಾರ್ಧದಿಂದ ಹದಿನೆಂಟನೆಯ ಶತಮಾನದ ಪ್ರಥಮಾರ್ಧದವರೆಗೆ ವಿಜಯನಗರ ಪತನಾನಂತರ ಸ್ವತಂತ್ರ ಪಾಳೆಯಗಾರರಾಗಿ, ಮಧ್ಯಯುಗೀನ ಮಧ್ಯಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿ ಆಳ್ವಿಕೆ ನಡೆಸಿದ್ದಾರೆ. ಸಮರ್ಥ ಆಳ್ವಿಕೆ ನಡೆಸಿದ್ದ ಚಿತ್ರದುರ್ಗ

***Please cite this article as:*** ರೇವಣಸಿದ್ದಪ್ಪ, ಎಸ್. (2026). ಚಿತ್ರದುರ್ಗ ಪಾಳೆಯಗಾರರ ರಾಜಕೀಯ ಚರಿತ್ರೆ : ಚಾರಿತ್ರಿಕ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್,* 5(3), 130–137

ಸಂಸ್ಥಾನ ಹದಿನೆಂಟನೆಯ ಶತಮಾನದ ದ್ವಿತೀಯಾರ್ಧದ ಭಾಗದಲ್ಲಿ ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಅಧೀನಕ್ಕೆ ಒಳಗಾಗಿ ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು. ಇವರ ಚರಿತ್ರೆಯನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಆರಂಭದಿಂದ ಅಂತ್ಯದವರೆಗೂ ತಮ್ಮ ಬದುಕಿನ ಉದ್ದಕ್ಕೂ ಧೈರ್ಯ ಸಾಹಸಗಳಿಂದ ಹೋರಾಟ ನಡೆಸಿರುವುದು ಕಂಡುಬರುವುದರಿಂದ, ಇವರದೊಂದು ಯೋಧ ಜನಾಂಗವೇ ಸರಿ.

ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರು ತಮ್ಮ 'ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಥಾನಗಳ ಚರಿತ್ರೆ' ಎಂಬ ಕೃತಿಯ 244ನೇ ಪುಟದಲ್ಲಿ ದಾಖಲಿಸಿರುವ "ಸಾಮ್ರಾಜ್ಯಗಳ ವೈಭವವನ್ನು ಸಂಸ್ಥಾನಗಳ ಪ್ರಗತಿಯಿಂದ ನೋಡು ಎನ್ನುವ ಹಾಗೆ ಅಥವಾ ಸಂಸ್ಥಾನಗಳು ಆಳಿದರೆ ಸಾಮ್ರಾಜ್ಯಗಳೂ ಆಳಿದಂತೆಯೇ ಸರಿ" ಎನ್ನುವ ಮಾತಿನಂತೆ, ಚಿತ್ರದುರ್ಗ ಪಾಳೆಯಗಾರರ ಆಡಳಿದ ಸಾಂಸ್ಕೃತಿಕ ಚರಿತ್ರೆಯಲ್ಲಿ ವಿಜಯನಗರ ಪತನಾನಂತರ ತನ್ನ ಜೀವಂತಿಕೆಯನ್ನು ಕಂಡುಕೊಂಡಿತ್ತು. ಕರ್ನಾಟಕ ಇತಿಹಾಸದಲ್ಲಿ ಚಿತ್ರದುರ್ಗದ ನಾಯಕ ಅರಸರ ಪಾತ್ರ ಬಹಳ ಮಹತ್ವವಾದದ್ದು ವಿಜಯನಗರ ಪತನಾನಂತರ ಅಧಿಕಾರಕ್ಕೆ ಬಂದ ನಾಯಕ ಅರಸು ಮನೆತನಗಳಲ್ಲಿ ಇದು ಅತ್ಯಂತ ಬಲಿಷ್ಠವಾದುದು. ವಿಜಯನಗರ ಪತನಾನಂತರ ಅದರ ಸಾಂಸ್ಕೃತಿಕ ಸಂದರ್ಭಗಳನ್ನೆಲ್ಲಾ ಮುಂದುವರೆಸಿಕೊಂಡು ಬಂದಿದ್ದ ಈ ಮನೆತನದ ಅರಸರು ಕ್ರಿ.ಶ. 1568 ರಿಂದ 1779ರ ವರಗೆ ಇನ್ನೂರಾ ಹನ್ನೊಂದು ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ. ಇವರ ಆಳ್ವಿಕೆಯ ಅವಧಿಯ ಬಗ್ಗೆ ವಿದ್ವಾಂಸರಲ್ಲಿ ಒಂದಭಿಪ್ರಾಯವಿಲ್ಲ. ಈ ನಾಯಕರು ಒಟ್ಟು ಎಷ್ಟು ವರ್ಷಗಳ ಕಾಲ ಚಿತ್ರದುರ್ಗ ಪ್ರಾಂತ್ಯವನ್ನು ಆಳಿದರು ಎಂಬ ಬಗ್ಗೆ ನಾನಾ ಬಗೆಯ ಹೇಳಿಕೆಗಳು ಬಂದಿವೆ. ಇವರು ಆಳಿದ್ದು 211 ವರ್ಷ, 217ವರ್ಷ, 224 ವರ್ಷ, 265 ವರ್ಷ, 276 (272)ವರ್ಷ, 411 ವರ್ಷ, 459 ವರ್ಷ ಹೀಗೆ ಬೇರೆ ಬೇರೆ ಅಭಿಪ್ರಾಯಗಳಿವೆ.

ಡಾ. ಬಿ. ರಾಜಶೇಖರಪ್ಪ ಅವರು ತಮ್ಮ ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನಗಳೆರಡನ್ನು ಆಧರಿಸಿ ಚಿತ್ರದುರ್ಗ ಪಾಳೆಯಗಾರರ ಒಟ್ಟು ಆಳ್ವಿಕೆಯ ಕಾಲ 231 ವರ್ಷಗಳು ಎಂದಿದ್ದಾರೆ. ಅದಕ್ಕೆ ಅವರು ಕ್ರಿ.ಶ. 1549ರ ವೇಳೆಗೆ ಚಿತ್ರದುರ್ಗ ಪಾಳೆಯಗಾರರ ವಂಶಸ್ಥಾಪಕನಾದ ಮತ್ತಿ ತಿಮ್ಮಣ್ಣನಾಯಕ 'ಶ್ರೀಮನ್ಮಹಾನಾಯಕಾಚಾರ್ಯ' ಎಂಬ ಸ್ಥಾನ ಗೌರವ ಪಡೆದು ಪ್ರಾಂತ್ಯಪಾಲಕನಾಗಿದ್ದನ್ನು ಪರಿಗಣಿಸಿ ಚಿತ್ರದುರ್ಗ ಪಾಳೆಯಗಾರರ ಆಳ್ವಿಕೆ ಕ್ರಿ.ಶ. 1549 ರಿಂದ 1779 ರವರೆಗೆ ಅಂದರೆ ಸಂಸ್ಥಾನ ಹೈದರಾಲಿಯ ವಶವಾಗುವವರೆಗೆ ಒಟ್ಟು 231 ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದರು ಎಂದು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಕನಿಷ್ಠ ಕ್ರಿ.ಶ. 1549 ರಿಂದ 1779ರಲ್ಲಿ ಈ ಸಂಸ್ಥಾನ ಹೈದರಾಲಿಯ ವಶವಾಗುವವರೆಗೆ ಸುಮಾರು 231 ವರ್ಷಗಳ ಕಾಲ ಇವರ ಆಳ್ವಿಕೆ ನಡೆಯಿತು ಎಂದು ಇಟ್ಟುಕೊಳ್ಳಬಹುದು.[1] ಆದರೆ, ಬಹುತೇಕ ಸಂಶೋಧಕರು ಈ ಮನೆತನದ ಅರಸರು ಕ್ರಿ.ಶ. 1568 ರಿಂದ 1779ರ ವರಗೆ ಇನ್ನೂರಾ ಹನ್ನೊಂದು ವರ್ಷಗಳ ಕಾಲ ಆಳ್ವಿಕೆ ಮಾಡಿದ್ದಾರೆ ಎಂಬ ಅಭಿಪ್ರಾಯಕ್ಕೆ ಬದ್ಧರಾಗಿದ್ದಾರೆ.

ಚಿತ್ರದುರ್ಗವನ್ನ ಆಳಿದ ಪಾಳೆಯಗಾರರು ತಮ್ಮ ಆಡಳಿತಾವಧಿಯಲ್ಲಿ ಚಿತ್ರದುರ್ಗದ ಹೆಸರನ್ನು ಚಿರಸ್ಥಾಯಿಗೊಳಿಸಿದ್ದರು. ಇವರ ಶೌರ್ಯ ಸಾಹಸಗಳನ್ನು ಕೇಳದವರು ವಿರಳವೆನ್ನಬೇಕು. ಇಲ್ಲಿರುವ ಕೋಟೆ, ಕೊತ್ತಲ, ದೇವಾಲಯ, ಕೆರೆ, ಕುಂಟೆ ಮತ್ತು ಕಾಲುವೆಗಳು ಇಂದಿಗೂ ಅವರ ಸಾಧನೆ ಸಾರುವ ಪ್ರತ್ಯಕ್ಷ ಸಾಕ್ಷಿಗಳಾಗಿವೆ. ಚಿತ್ರದುರ್ಗ ಪಾಳೆಯಗಾರರು ತಮ್ಮ ಸುತ್ತಲಿನ ರಾಯದುರ್ಗ, ಹರತಿ, ಬೇಲೂರು, ಗುಡೇಕೋಟೆ, ಜರಿಮಲೆ, ಸಂತೆಬೆನ್ನೂರು, ನಾಯಕನಹಟ್ಟಿ, ಮತ್ತೋಡು ಮುಂತಾದ ಪಾಳೆಯಗಾರರ ಮೇಲೆ ರಾಜಕೀಯ

ಪ್ರಭಾವ ಬೀರಿದ್ದರು. ಕರ್ನಾಟಕದ ಚರಿತ್ರೆಯಲ್ಲಿ ಇವರ ಕಾಲ ವಿವಿಧ ದೃಷ್ಟಿಕೋನಗಳಿಂದ ಮಹತ್ವದ್ದಾಗಿದೆ. ಚಿತ್ರದುರ್ಗವನ್ನು 'ಗಂಡು ಮೆಟ್ಟಿನ ನಾಡು' ಎಂದು ಕರೆಯುವುದು ವಿಶೇಷವಾಗಿದೆ. ಬೇಡಜನಾಂಗದ ಇವರು ತಮ್ಮನ್ನು 'ವಾಲ್ಮೀಕಿ ಗೋತ್ರ'ದವರೆಂದೂ ಕಾಮಗೇತಿ ವಂಶದವರಾದ್ದರಿಂದ 'ಕಾಮಗೇತಿ', 'ಕಾಮಗೇತಿ ಕಸ್ತೂರಿ' ಎಂದೂ ಶಾಸನಗಳಲ್ಲಿ ಕರೆದುಕೊಂಡಿದ್ದಾರೆ. 'ಶ್ರೀಮನ್ಮಹಾನಾಯಕಾ ಚಾರ್ಯ', 'ಹಗಲು ಕಗ್ಗೋಲೆಯ ಮಾನ್ಯ', 'ಗಾದ್ರಿಮಲೆ ಹೆಬ್ಬುಲಿ', 'ಹರಿಹರರಾಯರ ಮರ್ಧನ', 'ಮಲೆನಾಡಿನ ವರಗಂಡ', 'ಚಂದ್ರಗಾವಿಯ ಛಲದಂಕ', 'ಭಾರಿನಿಗಳಾಂಕ' ಹಾಗೂ 'ದೊಳಗ್ಗೆವಜ್ಜರ' ಮುಂತಾದ ಬಿರುದುಗಳನ್ನು ಧರಿಸಿದ್ದಾರೆ.[2]

ಮತ್ತಿ ಸಂತತಿ ಮತ್ತು ಬಿಳಿಚೋಡು ವಂಶದವರು ಚಿತ್ರದುರ್ಗವನ್ನಾಳಿದರು. ಮತ್ತಿ ಸಂತತಿಗೆ ಮೂಲಪುರುಷ ಮತ್ತಿ ತಿಮ್ಮಣ್ಣ ನಾಯಕ. ಮೇಲ್‌ದುರ್ಗದ ಕೋಟೆಯನ್ನು ಮೊದಲು ಕಟ್ಟಿಸಿದವನು ಇವನೇ. ಇವನು ಗೋಪಾಲದೇವರ ಗುಡಿಯನ್ನೂ, ರಂಗಪಟ್ಟಣ ಎಂಬ ಊರನ್ನೂ ಕಟ್ಟಿಸಿದ್ದನು.[3] ಚಿತ್ರದುರ್ಗ ನಾಯಕ ಅರಸರ ಮೂಲ ಪುರುಷ ಮತ್ತಿ ತಿಮ್ಮಣ್ಣನಾಯಕ(ಕ್ರಿ.ಶ. 1568–1589) ವಿಜಯನಗರದ ಪ್ರತಿನಿಧಿಯಾಗಿದ್ದ ಸಂದರ್ಭದಲ್ಲಿ ಸಾಳ್ವ ನರಸಿಂಗರಾಯನಿಂದ ಕ್ರಿ.ಶ. 1560ರಲ್ಲಿ ಹೊಳಲಕೆರೆ, ಹಿರಿಯೂರುಗಳನ್ನು ನಂತರ ಕ್ರಿ.ಶ. 1568ರಲ್ಲಿ ಚಿತ್ರದುರ್ಗದ ನಾಯಕತನವನ್ನು ಪಡೆದಿದ್ದನು. ವಿಜಯನಗರದ ಅರಸ ತಿರುಮಲನ ಮನ್ನಣೆಗೂ ಪಾತ್ರನಾಗಿದ್ದ ತಿಮ್ಮಣ್ಣನಾಯಕ ತನ್ನ ಮಗ ಓಬಣ್ಣನಾಯಕ, ತಮ್ಮ ಗುಲುಪಿನಾಯಕ, ಅಣ್ಣ ಓಬಣ್ಣನಾಯಕನ ಜೊತೆಗೂಡಿ ಸಾಳುವ ನರಸಿಂಗರಾಯನ ನೇತೃತ್ವದಲ್ಲಿ ಕಲಬುರ್ಗಿ ಕೋಟೆ ಆಕ್ರಮಣಮವನ್ನು ಸಾಧಿಸಿದ್ದರಿಂದ ವಿಜಯನಗರದ ಅರಸರಿಂದ 'ಹಗಲು ಕಗೊಲೆಯ ಮಾನ್ಯ' ಎಂಬ ಬಿರುದು ಪಡೆದಿದ್ದನು. ಇವನನ್ನು ವಿಜಯನಗರದರಸರು ಮೂರು ತಿಂಗಳ ಕಾಲ ತಮ್ಮಲ್ಲಿ ಅತಿಥಿಯನ್ನಾಗಿರಿಸಿಕೊಂಡು, ಚಿನ್ನದ ನೀರು ಕುಡಿಸಿದ ಶಂಖು, ಚಕ್ರ, ಅಂದಳ ಮತ್ತು ಮೊಸಳಿ ಬಾಯಿಜೋಡು, ಫಿರಂಗಿ, ಶ್ವೇತ ಛತ್ರಿ, ಚಿನ್ನದ ಹಸ್ತ, ಹಗಲ ದೀವಟಿಗೆ ನೀಡಿ ಗೌರವಿಸಿದ್ದರು. ನಂತರ ತನ್ನ ಸೀಮೆಯಲ್ಲಿ ಗ್ರಾಮದೇವಾಲಯ, ಜಲಾಶಯ, ಕೋಟೆ–ಕೊತ್ತಳಗಳನ್ನು ನಿರ್ಮಾಣ ಮಾಡಿ, ಆಡಳಿತ ಭದ್ರಪಡಿಸಿ, ರಾಜ್ಯವನ್ನು ವಿಸ್ತರಿಸಲು ಪ್ರಯತ್ನಿಸಿದ್ದನು.

ಮತ್ತಿ ತಿಮ್ಮಣ್ಣನಾಯಕ ಶೂರನೂ ಸಾಹಸಿಯೂ ಆಗಿದ್ದಂತೆ ಸ್ವಾಭಿಮಾನಿಯೂ ಆಗಿದ್ದನು. ಅವನ ಸ್ವತಂತ್ರ ಪ್ರವೃತ್ತಿಯನ್ನು ಸಹಿಸದ ಕೆಲವರ ಚಾಡಿ ಮಾತಿಗೆ ಹಾಗೂ ತಮ್ಮ ವಿರುದ್ಧ ತಿರುಗಿಬಿದ್ದ ಇವನನ್ನು ವಿಜಯನಗರದರಸರು ಸೆರೆಯಲ್ಲಿಟ್ಟಿದ್ದರು. ಪರಿಣಾಮ, ತಿಮ್ಮಣ್ಣನಾಯಕ ಕ್ರಿ.ಶ. 1589ರಲ್ಲಿ ಸೆರೆಯಲ್ಲಿಯೇ ಜೀವಬಿಟ್ಟಿದ್ದನು.

ಮತ್ತಿ ತಿಮ್ಮಣ್ಣನಾಯಕನ ತರುವಾಯ ಅವನ ಮಗ ಓಬಣ್ಣನಾಯಕ(ಕ್ರಿ.ಶ. 1589–1602) ಚಿತ್ರದುರ್ಗದ ಅರಸನಾದನು. ದದ್ಯಾನ್ನದ ಓಬಣ್ಣನಾಯಕ, ಠಾಣ್ಯದ ಓಬಳನಾಯಕ, ಅಣ್ಣಗಾರ ಓಬಣ್ಣ, ಗಡ್ಡದ ಮದಕರಿ ಮೊದಲಾದ ಬಹು ಹೆಸರಿನಿಂದ ಕರೆಯಲ್ಪಟ್ಟಿರುವ ಇವನು ರಸಸಿದ್ಧರಿಂದ 'ಮದಕರಿ' ಎಂಬ ಬಿರುದು ಪಡೆದಿದ್ದನು. ತಿಮ್ಮಣ್ಣನ ಕಾಲದಲ್ಲಿ ಹರಪನಹಳ್ಳಿ ನಾಯಕರೊಂದಿಗಿದ್ದ ರಕ್ತಸಂಬಂಧ ಓಬಣ್ಣನ ಕಾಲದಲ್ಲಿ ಮುಂದುರೆಯದಿದ್ದರಿಂದ ಹರಪನಹಳ್ಳಿ ಸಂಸ್ಥಾನ ಚಿತ್ರದುರ್ಗದೊಂದಿಗೆ ವೈರತ್ವ ಬೆಳೆಸಿಕೊಂಡಿತ್ತು. ಕನಕಗಿರಿಯ ರಂಗಪ್ಪನಾಯಕನ ಮಗಳು ಕನಕವ್ವ ನಾಗತಿಯನ್ನು ಮದುವೆಯಾಗಿ ಕನಕಗಿರಿಯೊಂದಿಗೆ ವೈವಾಹಿಕ ಬಾಂಧವ್ಯ ಬೆಳೆಸಿದ್ದನು. ವಿಜಯನಗರದ ಅಧೀನತೆಯಿಂದ ಹೊರಬಂದು ಸ್ವತಂತ್ರನಾಗಿ ಅಧಿಕಾರ ನಡೆಸಿದ್ದ ಮದಕರಿ ಓಬಣ್ಣನಾಯಕನಿಗೆ ಗುಂಟನೂರ ಮಲ್ಲಪ್ಪ ಸಮರ್ಥ ಪ್ರಧಾನಿಯಾಗಿದ್ದನು.

ಕ್ರಿ.ಶ. 1602ರಲ್ಲಿ ಮದಕರಿ ಓಬಣ್ಣನಾಯಕನ ಮರಣದ ನಂತರ ಅಧಿಕಾರಕ್ಕೆ ಬಂದ ಅವನ ಮಗ

ಒಂದನೇ ಕಸ್ತೂರಿ ರಂಗಪ್ಪನಾಯಕ(ಕ್ರಿ.ಶ. 1602–1652)ನ ಅಧಿಕಾರವಧಿ ಸಂಘರ್ಷದಿಂದ ಕೂಡಿತ್ತು. ಕ್ರಿ.ಶ. 1634ರಲ್ಲಿ ತನ್ನ ಪ್ರಾಂತ್ಯದ ಮೇಲೆ ದಾಳಿ ಮಾಡಿದ್ದ ತರೀಕೆರೆಯ ಕೆಂಗಹನುಮಪ್ಪ ನಾಯಕನನ್ನು ಸೆರೆಹಿಡಿದು ನಂತರ ಬಿಡುಗಡೆಗೊಳಿಸಿದ್ದನು. ಕ್ರಿ.ಶ. 1636ರಲ್ಲಿ ಹರಪನ ಹಳ್ಳಿಯ ಇಮ್ಮಡಿ ಬಸವಂತಪ್ಪ ನಾಯಕನನ್ನು ಸೋಲಿಸಿದ್ದನು. ಕ್ರಿ.ಶ. 1638ರಲ್ಲಿ ಹಿರಿಯೂರು ಕೆಂಚಣ್ಣನಾಯಕನ ಮಾತಿನಂತೆ ಹಿರಿಯೂರಿಗೆ ಮುತ್ತಿಗೆಹಾಕಿದ್ದ ಸಿರಾದ ರಂಗಪ್ಪನಾಯಕನನ್ನು ಸೋಲಿಸಿದ್ದನು.[4] ಬಸವಾಪಟ್ಟಣದ ಪಾಳೆಯಗಾರನನ್ನು ಸೋಲಿಸಿ ಮಾಯಕೊಂಡ, ಸಂತೆಬೆನ್ನೂರು, ಹೊಳಲ್ಕೆರೆ, ಅಣಜಿ, ಜಗಳೂರುಗಳನ್ನು ತನ್ನ ಪಾಳೆಯಪಟ್ಟಿಗೆ ಸೇರ್ಪಡೆ ಮಾಡಿದ್ದನು.[5] ಕಸ್ತೂರಿರಂಗಪ್ಪನ ಕಾಲದಲ್ಲಿ ಚಿತ್ರದುರ್ಗ ಸುಮಾರು 22 ಸೀಮೆಗಳ ಸಂಸ್ಥಾನವಾಗಿ ವಿಸ್ತಾರ ಪಡೆದಿತ್ತು. ಆಗ ಅದರ ಒಟ್ಟು ವಾರ್ಷಿಕ ಆದಾಯ 65 ಸಾವಿರ ದುರ್ಗಿ ಪಗೋಡಗಳು. ಗಾದ್ರಿಮಲೆಯ ಜನರನ್ನು ಕಾಡುತ್ತಿದ್ದ ಹೆಬ್ಬುಲಿಯನ್ನು ಕೊಂದು 'ಗಾದ್ರಿಮಲೆ ಹೆಬ್ಬುಲಿ' ಎಂಬ ಬಿರುದನ್ನು ಪಡೆದಿದ್ದ ಕಸ್ತೂರಿ ರಂಗಪ್ಪನಾಯಕ ಕ್ರಿ.ಶ. 1652ರಲ್ಲಿ ತೀರಿಕೊಂಡಿದ್ದನು.[6]

ಒಂದನೇ ಕಸ್ತೂರಿ ರಂಗಪ್ಪನಾಯಕನ ನಂತರ ಅಧಿಕಾರಕ್ಕೆ ಬಂದ ಅವನ ಮಗ ಇಮ್ಮಡಿ ಮದಕರಿನಾಯಕ(ಕ್ರಿ.ಶ.1652–1674) 'ಗಂಡುಗೊಡಲಿ ಸರ್ಜ' ಎಂಬ ಬಿರುದಿಗೆ ಪಾತ್ರನಾಗಿದ್ದನು. ತರೀಕೆರೆಯ ಹನುಮಪ್ಪನಾಯಕ ಮತ್ತು ಪಟ್ಟಾಭಿರಾಮನಾಯಕನನ್ನು ಸೋಲಿಸಿ ನನ್ನಿವಾಳ. ಐಮಂಗಲವನ್ನು ವಶಪಡೆದಿದ್ದನು. ಕ್ರಿ.ಶ. 1662ರಲ್ಲಿ ಹಿರಿಯೂರಿನ ಮೇಲೆ ಜಯ ಸಾಧಿಸಿದ್ದನು. ಇವನ ಕಾಲದಲ್ಲಿ ಸಂಸ್ಥಾನದ ಸೀಮೆಗಳು ಒಂದು ಲಕ್ಷ ಆದಾಯ ತರುವ ಸೀಮೆಗಳಾಗಿದ್ದವು. ಅವನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ವಿಭಾಗಕ್ಕೂ ಮುಖ್ಯಾಧಿಕಾರಿಯನ್ನು ನೇಮಿಸಿದ್ದನು. ಇವನು ಕ್ರಿ.ಶ. 1674ರಲ್ಲಿ ಮರಣ ಹೊಂದಿದ್ದನು.[7]

ತರುವಾಯ ಅವನ ಸಾಕುಮಗ ಇಮ್ಮಡಿ ಓಬಣ್ಣನಾಯಕ(ಕ್ರಿ.ಶ. 1774–1775) ಅಧಿಕಾರಕ್ಕೆ ಬಂದ ಕೂಡಲೇ ಚಿತ್ರದುರ್ಗದಲ್ಲಿ ಅಶಾಂತತೆ ಹರಡಿತ್ತು. ಈ ಹಿಂದೆ ಕಣಕುಪ್ಪೆಯಲ್ಲಿ ಆಶ್ರಯ ಪಡೆದುಕೊಂಡಿದ್ದ, ಕಸ್ತೂರಿ ರಂಗಪ್ಪನಾಯಕನ ಹಿರಿಯ ಮಗನಾಗಿದ್ದ, ಸರ್ಜೆರಾಯನ ಹಿರಿಯ ಮಗನಾದ ಚಿಕ್ಕಣ್ಣನಾಯಕನನ್ನು ದಳವಾಯಿ ದಾಸಣ್ಣ ಮತ್ತು ರಂಗಪ್ಪ ಕರೆತಂದು, ಕ್ರಿ.ಶ. 1675ರಲ್ಲಿ ಚಿತ್ರದುರ್ಗದ ನಾಯಕನನ್ನಾಗಿ ಪಟ್ಟ ಕಟ್ಟಿದ್ದರು.[8]

ಚಿಕ್ಕಣ್ಣನಾಯಕ(ಕ್ರಿ.ಶ. 1675–1686) ಪಟ್ಟಕ್ಕೆ ಬಂದ ಕೂಡಲೇ ನಿಡುಗಲ್ಲು ಸಾಣಿಕೆರೆಯನ್ನೂ ಹರಪನಹಳ್ಳಿ ಅಣಜಿಕೋಟೆಯನ್ನೂ ಮುತ್ತಿದ್ದವು. ಅವರೊಂದಿಗೆ ಒಪ್ಪಂದ ಮಾಡಿಕೊಂಡು ಅವುಗಳನ್ನು ಮರಳಿ ಪಡೆದಿದ್ದನು. ಕ್ರಿ.ಶ. 1676ರಲ್ಲಿ ಮೊಘಲರ ಷಂಷೇರ್ಖಾನ್‌ನು ಹರಿಹರವನ್ನು ಆಕ್ರಮಿಸಿದ್ದಾಗ, ಹರಿಹರದ ಸುಬೇದಾರ ಷೇರ್‌ಖಾನ್‌ನಿಗೆ ಸಹಾಯಮಾಡಿ ಹರಿಹರವನ್ನು ಉಳಿಸಿಕೊಟ್ಟಿದ್ದನು. ಕ್ರಿ.ಶ. 1677ರಲ್ಲಿ ರಾಯದುರ್ಗವನ್ನು ಆಕ್ರಮಿಸಿ ಬುಟುಗಲ ಓಬಯ್ಯನನ್ನು ಸೋಲಿಸಿದ್ದನು.[9]

ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದ ನಾಯಕನಹಟ್ಟಿ ಮಲ್ಲಪ್ಪನಾಯಕನ ಮಗಳು ಮಲ್ಲವ್ವ ನಾಗತಿಯನ್ನು ವಿವಾಹವಾಗಿದ್ದ ಇವನು ಅವರ ಪ್ರಭಾವದಿಂದ ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದನಾದರೂ, ಕೆಲವೇ ದಿನಗಳಲ್ಲಿ ಆ ಧರ್ಮದಿಂದ ಮರಳಿ ಮೂಲಧರ್ಮವನ್ನು ಅನುಸರಿಸಿದ್ದನು.[10] ತರಿಕೆರೆಯ ಹನುಪ್ಪನಾಯಕನ ಮಗಳು ಹನುಮವ್ವ ನಾಗತಿಯನ್ನು ವಿವಾಹವಾಗಿ ಅವರಿಗೆ ಈ ಹಿಂದೆ ವಶಪಡಿಸಿಕೊಂಡಿದ್ದ, ಗಡಿಗ್ರಾಮಗಳಾದ ಯಗಟಿ, ಯಳ್ಳಂಬಳಸಿ, ಚೌಳಹಿರಿಯೂರುಗಳನ್ನು ಹಿಂತಿರುಗಿಸಿದ್ದನು. ಕ್ರಿ.ಶ. 1680ರಲ್ಲಿ ಬಿಜಾಪುರದ ರಣದುಲ್ಲಾಖಾನನೂ ಹರಪನಹಳ್ಳಿಯವರೂ ಕೂಡಿ ಚಿತ್ರದುರ್ಗದ ಗಡಿಗಳ ಮೇಲೆ ಹಾಕಿದ ಮುತ್ತಿಗೆಯನ್ನು ಎದುರಿಸಿದ್ದನು. ಕ್ರಿ.ಶ. 1680ರಲ್ಲಿ ಬೂದಿಹಾಳನ್ನು ಮತ್ತು ರಾಮಗಿರಿಗಳನ್ನು

ಆಕ್ರಮಿಸಿಕೊಂಡಿದ್ದನು.[11] ಕ್ರಿ.ಶ. 1685ರಲ್ಲಿ ದಳವಾಯಿ ದಾಸಣ್ಣ ಮತ್ತು ಕುಂಟಪ್ಪ ನೇತೃತ್ವದಲ್ಲಿ ಹರಪನಹಳ್ಳಿಯರಿಂದ ಉಜ್ಜಿನಿಯನ್ನು ಬಿಡಿಸಿಕೊಳ್ಳಲು ವಿಫಲವಾಗಿದ್ದನು.

ಚಿಕ್ಕಣ್ಣನಾಯಕ ಕ್ರಿ.ಶ. 1686ರಲ್ಲಿ ಕಾಲವಾದ ನಂತರ ಚಿತ್ರದುರ್ಗದ ಅಧಿಕಾರ ಚಿಕ್ಕಣ್ಣನಾಯಕನ ಅಣ್ಣ ಲಿಂಗಣ್ಣನಾಯಕನೆಂದು ಕರೆಯಿಸಿಕೊಂಡ ಮುಮ್ಮಡಿ ಮದಕರಿನಾಯಕ(ಕ್ರಿ.ಶ. 1687–1689)ನ ವಶವಾಯಿತು. ಮುಮ್ಮಡಿ ಮದಕರಿನಾಯಕ ದುರ್ಬಲನಾಗಿದ್ದು ದಳವಾಯಿ ಪಂಚಮರ ಮುದ್ದಣ್ಣ ಅವನ ವಿರುದ್ಧ ತಿರುಗಿಬಿದ್ದಿದ್ದನು. ಪಂಚಮರ ಮುದ್ದಣ್ಣನ ವರ್ತನೆಯನ್ನು ವಿರೋಧಿಸಿದ್ದ ನಿಷ್ಠಾವಂತ ದಳವಾಯಿ ಭರಮಪ್ಪನು ಬಿಳಿಚೋಡಿನಲ್ಲಿದ್ದ ಚಿಕ್ಕಣ್ಣನಾಯಕನನ್ನು ಕರೆತಂದು ಅವನಿಗೆ ಕ್ರಿ.ಶ. 1689ರಲ್ಲಿ ಪಟ್ಟ ಕಟ್ಟಿದ್ದನು. ಇಲ್ಲಿಗೆ ಮತ್ತಿ ಸಂತತಿಯ ಅಧಿಕಾರ ಕೊನೆಗೊಂಡು ಬಿಳಿಚೋಡು ಸಂತತಿಯ ಅಧಿಕಾರ ಪ್ರಾರಂಭವಾಯಿತು. ಈ ಚಿಕ್ಕಣ್ಣನಾಯಕನೇ 'ಬಿಚ್ಚುಗತ್ತಿ ಭರಮಣ್ಣನಾಯಕ'ನೆಂದು ಚಿತ್ರದುರ್ಗದ ಸಂಸ್ಥಾನದಲ್ಲಿ ಹೆಸರಾಗಿದ್ದಾನೆ.

ಭರಮಣ್ಣನಾಯಕ(ಕ್ರಿ.ಶ. 1689–1721)ನ ಕಾಲದಲ್ಲಿ ಬಿಜಾಪುರವನ್ನು ಆಕ್ರಮಿಸಿದ್ದ ಮೊಘಲರು ಶಿರಾದವರೆಗೂ ಮುಂದುವರೆದಿದ್ದರು. ಬೂದಿಹಾಳು ಮತ್ತು ಬಸವಾಪಟ್ಟಣಗಳು ಮೊಘಲರ ಪರಗಣಗಳಾದವು. ಚಿತ್ರದುರ್ಗ ಸೇರಿದಂತೆ ಹಲವು ಸಂಸ್ಥಾನಗಳು ಮೊಘಲರಿಗೆ ಕಪ್ಪ ಕೊಡುವಂತಾಯಿತು.[12] ಹರಪನಹಳ್ಳಿ ಮತ್ತು ಬಿದನೂರಿನವರ ವಶವಾಗಿದ್ದ ಅಣಜಿಕೋಟೆಯನ್ನು ದಳವಾಯಿ ಭರಮಪ್ಪ ನೆರೆಯ ಸಂಸ್ಥಾನಿಕರ ನೆರವು ಪಡೆದು ಗೆದ್ದುಕೊಂಡಿದ್ದನು. ಕ್ರಿ.ಶ. 1697ರಲ್ಲಿ ಮರಾಠ ಸಂತಾಜಿ ಘೋರ್ಪಡೆ ಶಿರಾದ ಮೇಲೆ ದಾಳಿ ಮಾಡಿದ್ದಾಗ ಭರಮಣ್ಣನಾಯಕ ಸೈನ್ಯದ ಸಹಾಯ ಮಾಡಿ ಶಿರಾದ ಸುಬೇದಾರ ಖಾಸಿಂಖಾನನ್ನು ಸೋಲಿಸಲು ಸಫಲನಾಗಿದ್ದನು.[13] ಪರಿಣಾಮ, ಸಂತಾಜಿ ಘೋರ್ಪಡೆಯಿಂದ ದೊಡ್ಡೇರಿಯನ್ನು ಪಡೆದಿದ್ದನು. ಕ್ರಿ.ಶ. 1698ರಲ್ಲಿ ಭರಮಣ್ಣನಾಯಕ ಗುಡೇಕೋಟೆಯ ನಾಗಸಮುದ್ರವನ್ನು ಆಕ್ರಮಸಿ, ಗುಡೇಕೋಟೆಯ ಬಂಗಾರವ್ವ ನಾಗತಿಯನ್ನು ವಿವಾಹವಾಗಿದ್ದನು. ಕ್ರಿ.ಶ. 1699ರಲ್ಲಿ ಇಂದೂರಾಯ ಹಾಗೂ ರಾಯದುರ್ಗದವರು ನಾಯಕನಹಟ್ಟಿ ಕೋಟೆಗೆ ಮುತ್ತಿಗೆ ಹಾಕಿದ್ದಾಗ, ಹಟ್ಟಿ ಮಲ್ಲಪ್ಪನಾಯಕನೊಂದಿಗೆ ಸೇರಿ ಹಾವನೂರು, ಗುಡೇಕೋಟೆ, ನಿಡುಗಲ್ಲು, ರತ್ನಗಿರಿ, ಜರಿಮಲೆ ಮತ್ತು ಶಿರಾದ ಸೈನ್ಯವನ್ನು ಕೂಡಿಕೊಂಡು ನನ್ನಿವಾಳದ ಬಳಿ ಶತ್ರುಗಳನ್ನು ಎದುರಿಸಿ ಅವರನ್ನು ಕೊಟ್ಟೂರಿನವರೆಗೂ ಹೋಡಿಸಿಕೊಂಡು ಹೋಗಿ ಗೆಲುವು ಸಾಧಿಸಿದ್ದನು.[14]

ಕ್ರಿ.ಶ. 1706ರಲ್ಲಿ ರಾಯದುರ್ಗದ ಆಡಳಿತದಲ್ಲಿದ್ದ ಗೌರಸಮುದ್ರ ಕೋಟೆಯನ್ನು ಗೆದ್ದು, ಶಿರಾದ ಸುಬೇದಾರ ಫಡದುಲ್ಲಾಖಾನನಿಗೆ ಮಲೆನಾಡು ಸೀಮೆಯ ಹೊಳೆಹೊನ್ನೂರನ್ನು ಗೆದ್ದುಕೊಟ್ಟಿದ್ದನು. ಪರಿಣಾಮ, ಫಡದುಲ್ಲಾಖಾನ್ ದೊಡ್ಡರಿ, ಜಾಜೂರು ಸೀಮೆಗಳನ್ನು ನೀಡಿದ್ದನು. ಕ್ರಿ.ಶ. 1709ರಲ್ಲಿ ಹರಪನಹಳ್ಳಿಯನ್ನು ಗೆದ್ದು ಮರಳಿ ಅವರಿಗೇ ಬಿಟ್ಟುಕೊಟ್ಟಿದ್ದನು. ಕ್ರಿ.ಶ. 1721ರಲ್ಲಿ ಚಿತ್ರದುರ್ಗವನ್ನು ಆಕ್ರಮಿಸಲು ಮುಂದಾಗಿದ್ದ ಬಿಜಾಪುರದ ದಿಲಾವರ್‌ಖಾನನ ಸೈನ್ಯವನ್ನು ಹಿರಿಯೂರಿನಲ್ಲಿ ಸೋಲಿಸಿ, ನವಾಬನನ್ನು ಬಂಧಿಸಿದ್ದನು. ಬಿಚ್ಚುಗತ್ತಿ ಭರಮಣ್ಣನಾಯಕ ಕೇವಲ ಯುದ್ಧ ಸಾಧಕನಾಗಿರದೇ ಪ್ರಜಾಕಲ್ಯಾಣದ ಜನಾನುರಾಗಿಯೂ ಆಗಿದ್ದನು. ಇವನು ತನ್ನ ಆಡಳಿತಾವಧಿಯಲ್ಲಿ ಇಪ್ಪತ್ತೊಂದು ಕೆರೆಗಳು, ಮೂವತ್ತು ದೇವಾಲಯಗಳು, ನಾಲ್ಕು ಅರಮನೆಗಳು ಹಾಗೂ ಐದು ಬಲಿಷ್ಠ ಕೋಟೆಗಳನ್ನು ನಿರ್ಮಿಸಿದ್ದನು. ಉಚ್ಚಂಗಿ ದುರ್ಗದಿಂದ ಉತ್ಸವಾಂಬೆ ವಿಗ್ರಹ ತಂದು ಚಿತ್ರದುರ್ಗದಲ್ಲಿ ಪ್ರತಿಷ್ಠಾಪಿಸಿದ್ದನು. ಬಿಳಿಚೋಡು ವಂಶದ ಮೊದಲ ಅರಸನಾದ ಬಿಚ್ಚುಗತ್ತಿ ಭರಮಣ್ಣನಾಯಕನ ಆಳ್ವಿಕೆಯ ಕಾಲದಲ್ಲಿ ಚಿತ್ರದುರ್ಗದ ಪಾಳೆಯಪಟ್ಟು ಅತ್ಯಂತ ಉನ್ನತ

ಸ್ಥಿತಿಗೇರಿತ್ತು. ಪ್ರೊ. ಲಕ್ಷ್ಮಣ್ ತೆಲಗಾವಿಯವರ ಅಭಿಪ್ರಾಯದಂತೆ ಭರಮಣ್ಣನಾಯಕನ ಆಳ್ವಿಕೆಯ ಕಾಲ ಅಕ್ಷರಶಃ ಚಿತ್ರದುರ್ಗ ಸಂಸ್ಥಾನದ "ಸುವರ್ಣಯುಗ"ವಾಗಿತ್ತು.[15]

ಭರಮಣ್ಣನಾಯಕನ ನಂತರ ಅವನ ಮಗ ಹಿರೇಮದಕರಿನಾಯಕ(ಕ್ರಿ.ಶ.1721–1749) ಅಧಿಕಾರಕ್ಕೆ ಬಂದನು. ಇವನ ಕಾಲದ ಘಟನೆಗಳು ದಕ್ಷಿಣ ಭಾರತದ ಇತಿಹಾಸದಲ್ಲಿ ಪ್ರಾಮುಖ್ಯತೆ ಪಡೆದಿವೆ. ಇವನು ಪಟ್ಟಕ್ಕೆ ಬಂದ ಕೆಲವೇ ವರ್ಷಗಳಲ್ಲಿ ಮರಾಠರೊಡನೆ ಹಾಗೂ ಇತರ ಪಾಳೆಯಗಾರ ರೊಡನೆ ಯುದ್ಧ ಮಾಡಬೇಕಾಯಿತು.[16] ಈ ಅವಧಿಯಲ್ಲಿ ಕೆಳದಿ ಸಂಸ್ಥಾನ ಇತರೆ ಸಂಸ್ಥಾನದ ನೆರವಿನಿಂದ ಚಿತ್ರದುರ್ಗ ಸಂಸ್ಥಾನದ ಪ್ರಭಾವವನ್ನು ಕುಗ್ಗಿಸಲು ಪ್ರಯತ್ನಿಸಿತ್ತು.[17] ಕ್ರಿ.ಶ. 1721 ರಿಂದ 1726ರ ವರೆಗೆ ಮರಾಠ ಮತ್ತು ಮೊಘಲರ ವಿರುದ್ಧ ನಡೆದ ಯುದ್ಧದಲ್ಲಿ ನಿರತನಾಗಿದ್ದ ಇವನು, ಕ್ರಿ.ಶ. 1726ರಲ್ಲಿ ಉಚ್ಚಂಗಿದುರ್ಗವನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾಗಿದ್ದ. ಆದರೂ, ಹಾಗಲವಾಡಿ ಒಪ್ಪಂದದ ಮೂಲಕ ಹರತಿಕೋಟೆಯ ಅಧೀನದಲ್ಲಿದ್ದ ಉಚ್ಚಂಗಿ ಚಿತ್ರದುರ್ಗದ ವಶವಾಗಿತ್ತು. ಕ್ರಿ.ಶ. 1728ರಲ್ಲಿ ರತ್ನಗಿರಿ ಸೀಮೆಯ ವೇಣುಕಲ್ಲು ಮತ್ತು ಇಕ್ಕನೂರು, ಕ್ರಿ.ಶ. 1733ರಲ್ಲಿ ಗುಡೇಕೋಟೆ, ಕ್ರಿ.ಶ. 1736 ಮತ್ತು 1737ರಲ್ಲಿ ಕೊಡಗನೂರು ಮತ್ತು ಹೊಳಲು ಕೋಟೆಗಳಿಗೆ ಮುತ್ತಿಗೆ ಹಾಕಿದ್ದನು. ಕ್ರಿಶ. 1738ರಲ್ಲಿ ಸಿದ್ಧೋಜಿ ಮತ್ತು ಹಾವನೂರುಗಳನ್ನು ವಶಪಡಿಸಿಕೊಂಡು, ಬಿದನೂರು ಮತ್ತು ಹರಪನಹಳ್ಳಿಯವರು ಆಕ್ರಮಿಸಿದ್ದ ಹೊಳಲು ಮತ್ತು ಮೈಲಾರಕೋಟೆಗಳನ್ನು ಬಿಡಿಸಿಕೊಳ್ಳಲು ಹೋರಾಡಿದ್ದನು.[18]

ಕ್ರಿ.ಶ. 1739ರಲ್ಲಿ ಹದಡಿ, ಕಾಡಜ್ಜಿ, ಹೊದಿಗೆರೆ ಮತ್ತು ಮರವಂಜಿಗಳನ್ನು ವಶಪಡಿಸಿಕೊಂಡಿದ್ದನು. ಕ್ರಿ.ಶ. 1741 ರಲ್ಲಿ ಕೆಳದಿ ಬಸಪ್ಪನಾಯಕನ ಸೂಚನೆಯಂತೆ ರಾಮಗಿರಿ ಕೋಟೆಯನ್ನು ಹಿಡಿದದ್ದ ಹರಪನಹಳ್ಳಿ, ಆನೆಗೊಂದಿ, ಸವಣೂರು ಮತ್ತು ರಾಯದುರ್ಗ ಪಾಳೆಯಗಾರರನ್ನು ಸೋಲಿಸಿದ್ದನು.[19] ಇವರನ್ನೇ ಮತ್ತೊಮ್ಮೆ ಕ್ರಿ.ಶ. 1744ರಲ್ಲಿ ಸೋಲಿಸಿದ್ದನು. ಕ್ರಿ.ಶ. 1744 ರಿಂದ 1748 ರವರೆಗೆ ಯುದ್ಧ ನಡೆಸಿ ರಾಯದುರ್ಗದ ಸೀಮೆಯ ಗ್ರಾಮಗಳನ್ನು ವಶಪಡಿಸಿಕೊಂಡಿದ್ದನು. ಆದರೆ, ಕ್ರಿ.ಶ. 1748ರಲ್ಲಿ ಸವಣೂರು ಮತ್ತು ಹರಪನಹಳ್ಳಿಯವರು, ಚಿತ್ರದುರ್ಗದ ವಶದಲ್ಲಿದ್ದ ಹದಡಿಕೋಟೆ, ಹೊನ್ನೂರು, ಹೊಳಲು, ಮೈಲಾರ ಮತ್ತು ಬಿದನೂರುಗಳನ್ನು ವಶಪಡಿಸಿಕೊಂಡಿದ್ದರು. ಈ ಮನೆತನದವರು ಚಿತ್ರದುರ್ಗದವರೊಂದಿಗೆ ಹೊಂದಿದ್ದ ತೀವ್ರ ವೈರತ್ವದ ಕಾರಣ ಕ್ರಿ.ಶ. 1748–49ರಲ್ಲಿ ಭೀಕರ ಮಾಯಕೊಂಡ ಕಾಳಗ ನಡೆದಿತ್ತು. ಈ ಕಾಳಗದಲ್ಲಿ ಸೋಮಶೇಖರ ನಾಯಕನ 'ಹಯೋಮುಖ'ವೆಂಬ ಹೊಸ ಭರ್ಚಿಯಿಂದ ತೀವ್ರ ಗಾಯಗೊಂಡು ಹಿರೇಮದಕರಿನಾಯಕ ಮರಣಹೊಂದಿದ್ದನು. ಈ ಕಾಳಗದಲ್ಲಿ ಚಂದಾಸಾಹೇಬ ಮತ್ತು ಅವನ ಮಗ ಆಬಿದ್ ಅಲಿ(ಆಬಿದ್ ಸಾಹೇಬ್) ನೆರವಿಗೆ ಬಂದಿದ್ದರು. ಹಿರೇಮದಕರಿನಾಯಕನ ಮೃತ ದೇಹವನ್ನು ಮಾಯಕೊಂಡದಲ್ಲಿ ದಹನಮಾಡಿ ಅಲ್ಲಿಯೇ ಸಮಾಧಿಯನ್ನು ಕಟ್ಟಿಸಲಾಯಿತು. ಅವನ ಅಸ್ಥಿಶೇಷಗಳನ್ನು ಚಿತ್ರದುರ್ಗದಲ್ಲಿ ತಂದು ಭರಮಣ್ಣನಾಯಕನ ಸಮಾಧಿಯ ಹತ್ತಿರ ಒಂದು ಚಿಕ್ಕ ಮಂಟಪವನ್ನು ಕಟ್ಟಿಸಲಾಗಿತ್ತು.

ಹಿರೇಮದಕರಿನಾಯಕನ ತರುವಾಯ ಅಧಿಕಾರಕ್ಕೆ ಬಂದ ಅವನ ಮಗ ಇಮ್ಮಡಿ ಕಸ್ತೂರಿ ರಂಗಪ್ಪನಾಯಕ(ಕ್ರಿ.ಶ.1749–1754) ಮಾಯಕೊಂಡ ಕದನವನ್ನು ಮುಂದುವರೆಸಿ, ಕ್ರಿ.ಶ. 1749ರಲ್ಲಿ ಮುರಾರಿರಾಯ ಮತ್ತು ಮೋತಿಖಾನ್‌ರ ಬೆಂಬಲದಿಂದ ಬಿದನೂರು, ಹರಪನಹಳ್ಳಿ, ಮತ್ತಿತರ ಸಂಸ್ಥಾನಗಳ ದಂಡು ಮಾಯಕೊಂಡವನ್ನು ಬಿಟ್ಟು ಸಂತೆಬೆನ್ನೂರನ್ನು ಮುತ್ತುವಂತೆ ಮಾಡಿದ್ದನಾದರೂ, ಮರಾಠರು ಶತ್ರುಗಳ ಲಂಚದ ಆಮಿಷಕ್ಕೆ ಬಲಿಯಾದ ಕಾರಣ ಇಮ್ಮಡಿ ಕಸ್ತೂರಿ ರಂಗಪ್ಪನಾಯಕ ತನ್ನ ಉದ್ದೇಶ ಸಾಧನೆಯಲ್ಲಿ ಯಶಸ್ಸು ಕಾಣಲಿಲ್ಲ.

ಆನೆಗೊಂದಿಯವರು ವಡ್ಡಿಗೆ ಲಗ್ಗೆ ಹಾಕಿದರೂ ಆ ಕೋಟೆ ಅವರಿಗೆ ವಶವಾಗಲಿಲ್ಲ. ಎರಡನೇ ಕಸ್ತೂರಿ ರಂಗಪ್ಪನಾಯಕ ಕಂಪಲಿಗೆ ಸೇರಿದ ಏಳು ಗ್ರಾಮಗಳನ್ನು ವಶಪಡಿಸಿಕೊಂಡಿದ್ದನು. ರಾಯದುರ್ಗ ಸೀಮೆಯ ಕರೆಕಲ್ಲು ಮತ್ತು ತಿಮ್ಮಲಾಪುರ ಗ್ರಾಮಗಳೂ ಇವನ ವಶಕ್ಕೆ ಬಂದಿದ್ದವು.[20]

ಕ್ರಿ.ಶ. 1750 ರಲ್ಲಿ ಶಿರಾದ ಸುಬೇದಾರನಿಂದ ಹುಳಿಯಾರು, ಎಣ್ಣೆಗೆರೆ, ಹೆಗ್ಗೆರೆ, ಎಳನಾಡುಗಳನ್ನು ಕಾಣಿಕೆಯಾಗಿ ಪಡೆದಿದ್ದನು. ಕ್ರಿ.ಶ. 1751ರಲ್ಲಿ ಬೂದಿಹಾಳು ಸೀಮೆಯನ್ನು ವಶಪಡಿಸಿಕೊಂಡಿದ್ದನು. ಶಿರಾದ ಸುಬೇದಾರನಿಂದ ತೇಕಲವಟ್ಟಿ ಗ್ರಾಮವನ್ನು ಕ್ರಯಕ್ಕೆ ಪಡೆದುಕೊಂಡಿದ್ದನು.[21] ಕ್ರಿ.ಶ. 1751ರಿಂದ ಸಂಸ್ಥಾನದ ಪತ್ರ ವ್ಯವಹಾರಗಳಲ್ಲಿ ತನ್ನ ಹೆಸರಿನ ಮುಂದೆ ಬಿರುದುಗಳ ಅಂಕಿತವನ್ನು ಮಾಡಲಾರಂಭಿಸಿದ್ದನು.[22] ಹೊನ್ನೂರು ಮತ್ತು ಹದಡಿಗಳ ಮೇಲೆ ದಾಳಿ ನಡೆಸಿ ವಶಪಡಿಸಿಕೊಂಡಿದ್ದನು. ಕ್ರಿ.ಶ. 1752ರಲ್ಲಿ ಮರಾಠರ ನಾನಾಜಿರಾಯನ ವಡ್ಡಿನಹಳ್ಳಿಯನ್ನು ಆಕ್ರಮಿಸಿಕೊಂಡಿದ್ದಾಗ ಅದನ್ನು ಹಣ ನೀಡಿ ಉಳಿಸಿಕೊಂಡಿದ್ದನಾದರೂ, ಕ್ರಿ.ಶ. 1753ರಲ್ಲಿ ಅಣಜಿ ಕೋಟೆಗೆ ನಾನಾಜಿರಾಯ ಮುತ್ತಿಗೆ ಹಾಕಿದ್ದನು. ಪುನಃ ಹಣ ನೀಡಿ ಕೋಟೆಯನ್ನು ಬಿಡಿಸಿಕೊಂಡಿದ್ದನು. ಕ್ರಿ.ಶ. 1754ರಲ್ಲಿ ಮಸಕಲ್ಲು ಎಂಬ ಗ್ರಾಮವನ್ನು ಮುರಾರಿರಾವ್ ಘೋರ್ಪಡೆಗೆ ಕಾಣಿಕೆ ನೀಡಿದ್ದನು. ಈ ನಡುವೆ, ಕ್ರಿ.ಶ. 1754ರಲ್ಲಿ ಅನಾರೋಗ್ಯಪೀಡಿತನಾಗಿ ತೀರಿಕೊಂಡನು. ಎರಡನೇ ಕಸ್ತೂರಿ ರಂಗಪ್ಪನಾಯಕ ಪುತ್ರ ಸಂತಾನವಿಲ್ಲದ ಕಾರಣ, ಅವನ ತಾಯಿ ಗಂಡಿಲ ಓಬಳವ್ವನಾಗತಿ ಹೊಸ ಅರಸನನ್ನು ಪಟ್ಟಕ್ಕೆ ಕೂಡಿಸುವವರೆಗೆ ಚಿತ್ರದುರ್ಗದ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡು ಎರಡು ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದಳು.[23]

ಕ್ರಿ.ಶ. 1754 ರಿಂದ 1775ರ ವರೆಗೆ ಆಡಳಿತ ನಡೆಸಿರುವ ರಾಜಾ ವೀರಮದಕರಿ ನಾಯಕ, ರಾಜಾ ಚಿಕ್ಕ ವೀರಮದಕರಿ ನಾಯಕ ಮತ್ತು ಕಡೆಯ ಮದಕರಿನಾಯಕನೆಂತಲೂ ಕರೆಯಲ್ಪಟ್ಟಿದ್ದಾನೆ. ಸಂಸ್ಥಾನ ಅಪ್ರಾಪ್ತನ ನೇತೃತ್ವದಲ್ಲಿದೆ ಎಂಬ ಕಾರಣವನ್ನು ಮುಂದುಮಾಡಿ, ರಾಯದುರ್ಗದವರು ಹರಪನಹಳ್ಳಿಯವರ ನೆರವಿನಿಂದ ಚಿತ್ರದುರ್ಗದ ಗಡಿ ಪ್ರದೇಶಗಳನ್ನು ಆಕ್ರಮಿಸಿಕೊಳ್ಳಲು ಮುಂದಾಗಿದ್ದರು. ಆದರೆ, ಸಂಸ್ಥಾನದ ಸೈನ್ಯ ರಾಯದುರ್ಗದವರನ್ನು ಎದುರಿಸಿ, ರಾಯದುರ್ಗದ ಸೀಮೆಯ ಗಡಿತಾಣ್ಯಗಳನ್ನು ಹಾಗೂ ರಾಯದುರ್ಗದ ಪೇಟೆಯನ್ನು ವಶಪಡಿಸಿಕೊಂಡಿತ್ತು. ಕ್ರಿ.ಶ. 1760ರಲ್ಲಿ ಚಿತ್ರದುರ್ಗದ ತೂಯಲಹಳ್ಳಿಯನ್ನು ಸವಣೂರು ಮತ್ತು ತರಿಕರೆಯವರ ಜೊತೆಗೂಡಿ ಹರಪನಹಳ್ಳಿ ಪಾಳೆಯಗಾರ ಸೋಮಶೇಖರನಾಯಕನು ಮುತ್ತಿಗೆ ಹಾಕಲು ಪ್ರಯತ್ನಿಸಿದ್ದನು. ಮದಕರಿನಾಯಕ ಕಣಕುಪ್ಪೆಯಲ್ಲಿ ಸೋಮಶೇಖರನಾಯಕನ ಸೈನ್ಯವನ್ನು ಎದುರಿಸಿದ್ದನು. ಮೊದಮೊದಲಿಗೆ ಚಿತ್ರದುರ್ಗದವರು ಜಯದ ಕಡೆ ತಿರುಗಿದ್ದರೂ, ಕೊನೆ ಘಳಿಗೆಯಲ್ಲಿ ಜಯವಿಲ್ಲದೆ ಹಿಂದಿರುಗಬೇಕಾಯಿತು. ನಂತರ ಜರಿಮಲೆ ಮತ್ತು ತರೀಕೆರೆಯವರ ಹಾವಳಿಯನ್ನು ಅಡಗಿಸುವಲ್ಲಿ ಯಶಸ್ವಿಯಾಗಿದ್ದನು.

ಕ್ರಿ.ಶ. 1779ರ ವೇಳೆಗೆ ರಾಜಾ ವೀರಮದಕರಿ ನಾಯಕ ಹಾಗೂ ಹೈದರ್ ಅಲಿಯರಲ್ಲಿದ್ದ ಪರಸ್ಪರ ಆಂತರಿಕ ಕಲಹ ಮತ್ತು ಅಧಿಕಾರ ವಿಸ್ತರಣಾಕಾಂಕ್ಷೆಗಳು, ಇದೇ ಕಾಲಕ್ಕೆ ಆರಂಭವಾಗಿದ್ದ ಮರಾಠರ ಪ್ರತಿಸ್ಪರ್ಧೆಗಳು ಇವರಿಬ್ಬರನ್ನು ಹೋರಾಟಕ್ಕೆ ಮುಖಾಮುಖೀ ನಿಲ್ಲಿಸಿದ್ದವು. ಈ ಹಿನ್ನೆಲೆಯಲ್ಲಿ, ಕ್ರಿ.ಶ. 1762 ರಿಂದ 1779ರ ವರೆಗೆ ರಾಜಾ ವೀರಮದಕರಿ ನಾಯಕ, ಕ್ರಿ.ಶ. 1779 ರಿಂದ 1830ರ ವರೆಗೆ ದೊಡ್ಡ ಮದಕರಿನಾಯಕ ಹಾಗೂ 1830 ರಿಂದ 1849ರ ವರೆಗೆ ಜಂಪ(ಳ)ಣ್ಣನಾಯಕರು ಹೈದರ್, ಟಿಪ್ಪುಸುಲ್ತಾನ್, ಬ್ರಿಟೀಷರು ಮತ್ತು ಮೈಸೂರು ಅರಸರಿಂದ ಸಂಸ್ಥಾನವನ್ನು ಉಳಿಸಿಕೊಳ್ಳಲು ನಡೆಸಿದ್ದ ಹೋರಾಟದ ಚರಿತ್ರೆಯನ್ನು

ಚಿತ್ರದುರ್ಗ ಸಂಸ್ಥಾನ ಎಂದೆಂದಿಗೂ ಮರೆಯುವಂತದ್ದಲ್ಲ.

**ಕೊನೆಟಿಪ್ಪಣಿಗಳು**

1. ರಾಜಶೇಖರಪ್ಪ, ಬಿ. (2016). *ಪ್ರಾಚೀನ ಚಿತ್ರದುರ್ಗ.* ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆ, ಶ್ರೀ ಮುರುಘಾಮಠ. ಪು. 179.
2. ಅಮರೇಶ ಯತಗಲ್. (2018). *ಕರ್ನಾಟಕ ನಾಯಕ ಅರಸುಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು.* ಪಲ್ಲವಿ ಪಬ್ಲಿಕೇಷನ್. ಪು. 28.
3. ನಂಜುಂಡಸ್ವಾಮಿ, ಎ.ಎಸ್. (2012). *ಪಾಳೆಯಗಾರರು ಮತ್ತು ಒಡೆಯರ ಇತಿಹಾಸ.* ಸಮಾಜ ಪುಸ್ತಕಾಲಯ. ಪು. 42.
4. ಅಮರೇಶ ಯತಗಲ್. (2018). *ಪೂರ್ವೋಕ್ತ.* ಪು. 29.
5. ನಂಜುಂಡಸ್ವಾಮಿ, ಎ,ಎಸ್. (2012).*ಪೂರ್ವೋಕ್ತ.* ಪು. 43.
6. ಶ್ಯಾಮಲ, ಸಿ.ಆರ್. (2008). *ಪೂರ್ವ ಕರ್ನಾಟಕದ ಪಾಳೆಯಗಾರರು ಒಂದು ಅಧ್ಯಯನ.* ಕನ್ನಡ ಸಾಹಿತ್ಯ ಪರಿಷತ್. ಪು. 65.
7. ಅಮರೇಶ ಯತಗಲ್. (2018). *ಪೂರ್ವೋಕ್ತ.* ಪು. 30.
8. ಅದೇ. ಪು. 31.
9. ಲಕ್ಷ್ಮಣ್ ತೆಲಗಾವಿ. (1992). *ಚಿತ್ರದುರ್ಗನಾಯಕ ಅರಸರು–ರಾಜಕೀಯಚಿತ್ರ.* ದವನಸಿರಿ. ಪು. 77.
10. ಪುಟ್ಟಣ್ಣ, ಎಂ.ಎಸ್. (1997). *ಚಿತ್ರದುರ್ಗದ ಪಾಳೆಯಗಾರರು.* ಪು. 41.
11. ರಾಜಶೇಖರಪ್ಪ, ಬಿ. (2004). *ಪ್ರಾಚೀನ ಚಿತ್ರದುರ್ಗ* (ಪಿಎಚ್.ಡಿ. ಮಹಾಪ್ರಬಂಧ). ಕರ್ನಾಟಕ ವಿಶ್ವವಿದ್ಯಾಲಯ. ಪು. 139.
12. ಲಕ್ಮಣ್ ತೆಲಗಾವಿ. (1976). *ಚಿತ್ರದುರ್ಗ ಜಿಲ್ಲೆಯಲ್ಲಿ ಪಾಳೆಯಗಾರರ ಆಳ್ವಿಕೆ, ಚಂದ್ರವಳ್ಳಿ ಭಾಗ–1.* ಜಿಲ್ಲಾ ಇತಿಹಾಸ ಸಂಶೋಧನ ಮಂಡಳಿ. ಪು. 81.
13. ಮುದ್ದಾಚಾರಿ, ಬಿ. (1975). *ಮೈಸೂರು ಮರಾಠ ಬಾಂಧವ್ಯ.* ಪು. 187.
14. ಲಕ್ಷ್ಮಣ್ ತೆಲಗಾವಿ. (1992).*ಪೂರ್ವೋಕ್ತ.* ಪು. 38.
15. ಲಕ್ಷ್ಮಣ್ ತೆಲಗಾವಿ. (1974, ಆಗಸ್ಟ್ 16). ಮಾಯಕೊಂಡ: ಚಿತ್ರದುರ್ಗದ ಹಿರೇಮದಕರಿ ನಾಯಕ ಮಡಿದಸ್ಥಳ. *ಚಿತ್ರದುರ್ಗ ಜಿಲ್ಲಾ ಅಭಿವೃದ್ಧಿ ವಾರ್ತೆ.* ಪು. 17.
16. ಅದೇ, ಪು. 17.
17. ಲಕ್ಷ್ಮಣ್ ತೆಲಗಾವಿ. (1992). *ಪೂರ್ವೋಕ್ತ.* ಪು. 80.
18. ಅದೇ, ಪು. 80.
19. ಲಕ್ಮಣ್ ತೆಲಗಾವಿ. (1976). *ಪೂರ್ವೋಕ್ತ.* ಪು. 82.
20. ಅಮರೇಶ ಯತಗಲ್. (2018). *ಪೂರ್ವೋಕ್ತ.* ಪು. 36.
21. ಅದೇ, ಪು. 37.
22. ಶ್ಯಾಮಲ, ಸಿ.ಆರ್. (2008). *ಪೂರ್ವೋಕ್ತ.* ಪು. 79.
23. ಅಮರೇಶ ಯತಗಲ್. (2018). ಪೂರ್ವೋಕ್ತ, ಪು. 37.